

ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು. ಕೊಟ್ಟ ಮಾತನ್ನು ಮರೆಯಲು ಪ್ರಾಂಶುಪಾಲರು ರಾಜಕೀಯ ಮುಖಂಡರಂತೂ ಆಗಿರಲಿಲ್ಲ, ಹೀಗಾಗಿ ಅವರು ಮರುದಿನವೇ ಕಾಲೇಜಿನ ಶಿಸ್ತು ಸಮಿತಿಯ ಸಭೆಯನ್ನು ಕರೆದರು. ಶಿಸ್ತು ಸಮಿತಿಯವರು, ಈ ವಿಷಯ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ, ಏಕೆಂದರೆ ಈ ಸಮಿತಿಯನ್ನು ವಿದ್ಯಾರ್ಥಿಗಳಿಗೆ ಶಿಸ್ತು ಮೂಡಿಸಲು ರಚಿಸಲಾಗಿದೆ, ನಾಯಿಗಳಿಗೆ ಅಲ್ಲ ಎಂದು ತಮ್ಮ ಕೈಗಳನ್ನು ಮೇಲೆತ್ತಿದರು. ಇನ್ನು ವಿದ್ಯಾರ್ಥಿನಿ ಶ್ರೇಯಾಳನ್ನು ಶಿಸ್ತಿಗೊಳಪಡಿಸುವುದು ಸಹ ಸಾಧ್ಯವಿರಲಿಲ್ಲ, ಏಕೆಂದರೆ ವಿದ್ಯಾರ್ಥಿನಿಯರು ಹರಿದ ಜೀನ್ಸ್ ಧರಿಸುವುದು ಅಥವಾ ಕಾಲೇಜಿಗೆ ಹರಿದ ಬಟ್ಟೆಗಳನ್ನು ಧರಿಸಿ ಬರುವುದನ್ನು ತಡೆಯುವುದು ಮಹಿಳಾ ಸ್ವಾತಂತ್ರ್ಯವನ್ನು ಹತ್ತಿಕ್ಕುವುದಾಗುವುದು.